

ಡಾ. ಎಸ್. ರಾಮಮೂರ್ತಿ

# 8-9-2011ರಿಂದ 14-9-2011ರವರೆಗೆ



**ಮೇಷ**

ವಾರದ ಮಧ್ಯಭಾಗದವರೆಗೂ ಮನಶಾಂತಿ, ಕೈ ಹಾಕಿದ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು. ವ್ಯಾಪಾರ ಕ್ಷೇತ್ರಗಳಲ್ಲಿ ಪೈಪೋಟಿ ಇದ್ದರೂ ಲಾಭವಾಗುವುದು. ಶುಭ ಕಾರ್ಯಗಳು ಜರುಗುವುದು. ದೈವಿಕ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚುವುದು. ವಾರಾಂತ್ಯದಲ್ಲಿ ಒತ್ತಡ. ಲೆಕ್ಕ ಪತ್ರಗಳಲ್ಲಿ ತಪ್ಪುಗಳಾಗುವುದು. ಶುಭದಿನ: 10; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ತಂದೆಯವರು ವಿಚಿತ್ರವಾಗಿ ವರ್ತಿಸುವರು. ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ನಷ್ಟ ಪ್ರಾಪ್ತಿ. ವಾರದ ಮಧ್ಯಭಾಗದಿಂದ ಸಂತಸ. ಮನೋಬಲ ವೃದ್ಧಿ. ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರ ರಂಗದಲ್ಲಿ ಹೆಚ್ಚಿನ ಲಾಭ. ಪತಿ ಪತ್ನಿಯರಲ್ಲಿ ಸಾಮರಸ್ಯ. ವಿರೋಧಿಗಳಿಗೆ ಹಿನ್ನಡೆ. ಶುಭದಿನ: 13; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಆರಂಭದಲ್ಲಿ ಅಶಾಂತಿ. ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ಆದಾಯಕ್ಕಿಂತಲೂ ಅಧಿಕ ಖರ್ಚು. ಉದ್ಯೋಗ ವ್ಯಾಪಾರದಲ್ಲಿ ಹಿನ್ನಡೆ. ಪತ್ನಿಗೆ ಕಷ್ಟ ನಷ್ಟ ಪ್ರಾಪ್ತಿ. ವಾರದ ಮಧ್ಯ ಭಾಗದಿಂದ ಮನಶಾಂತಿ. ಉತ್ಸಾಹ ಹೆಚ್ಚುವುದು. ಕೆಲಸ ಕಾರ್ಯಗಳಲ್ಲಿ ಪ್ರಗತಿ, ಕ್ರಯ ವಿಕ್ರಯಗಳಲ್ಲಿ ನಿರೀಕ್ಷಿತ ಲಾಭ. ಪ್ರಯಾಣ ಸೌಖ್ಯ. ಆರ್ಥಿಕ ಮುನ್ನಡೆ. ಶುಭದಿನ: 12; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ



**ಕಟಕ**

ವಾರದ ಆರಂಭದಲ್ಲಿ ಸುಖ ಸೌಖ್ಯ. ಬಂಧುಗಳಿಂದ ಪ್ರಶಂಸೆ. ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರ ವಹಿವಾಟುಗಳಲ್ಲಿ ತಕ್ಕ ಲಾಭ. ತಂಟೆ ತಕರಾರುಗಳು ದೂರವಾಗುವುದು. ವಾರದ ಮಧ್ಯಭಾಗದಲ್ಲಿ ಭಯ. ಕೆಲಸ ಕಾರ್ಯಗಳಲ್ಲಿ ನಿರಾಸಕ್ತಿ. ವ್ಯವಹಾರಗಳಿಗೆ ವಿಘ್ನ. ಕುಟುಂಬದಲ್ಲಿ ಕಲಹ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 8; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಮಧ್ಯಭಾಗದವರೆಗೂ ಅನುಕೂಲ. ಕೈ ಹಾಕಿದ ಕೆಲಸ, ಕಾರ್ಯಗಳಲ್ಲಿ ಯಶಸ್ಸು. ಏಜೆನ್ಸಿ, ಲೇವಾದೇವಿಗಳಲ್ಲಿ ನಿರೀಕ್ಷಿತ ಲಾಭ. ಸ್ಪರ್ಧೆಗಳಲ್ಲಿ ಗೆಲುವು. ಹಿರಿಯ ಮಿತ್ರರಿಂದ ಸಹಾಯ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವಿಕೆ. ವಾರಾಂತ್ಯದಲ್ಲಿ ಅಶಾಂತಿ. ಪತಿ ಪತ್ನಿಯರಲ್ಲಿ ಮನಸ್ತಾಪ. ಉದ್ಯೋಗದಲ್ಲಿ ಹಿನ್ನಡೆ. ಶುಭದಿನ: 11; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಮಕ್ಕಳಿಂದ ಕಿರಿಕಿರಿ. ವ್ಯಾಪಾರ ವೃತ್ತಿಗಳಲ್ಲಿ ಸ್ವಲ್ಪ ಲಾಭವಾಗುವುದು. ವಾರದ ಮಧ್ಯಭಾಗದಿಂದ ವಿರೋಧಿಗಳು ಹಿನ್ನಡೆಯುವರು, ಕ್ರೀಡೆಗಳಲ್ಲಿ ಮೇಲುಗೈ, ಮನಶಾಂತಿ. ವಾಹನ ಖರೀದಿ ಯತ್ನ. ಕುಟುಂಬದಲ್ಲಿ ಒಮ್ಮತ. ಪತಿ ಪತ್ನಿಯರಲ್ಲಿ ಸಾಮರಸ್ಯ. ಉಡುಗೊರೆ ಪ್ರಾಪ್ತಿ. ಆಪ್ತರಿಂದ ಸಹಾಯ. ಶುಭದಿನ: 13; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಆರಂಭದಲ್ಲಿ ಚಂಚಲ ಮನಸ್ಸು. ನಿರೀಕ್ಷೆಗೂ ಮೀರಿದ ಖರ್ಚು. ಆತಂಕ ಉಂಟಾಗುವ ಘಟನೆಗಳು. ಕಾರ್ಯಗಳಲ್ಲಿ ಹಿನ್ನಡೆ. ಲೇವಾದೇವಿಗಳಲ್ಲಿ ಹಾನಿ. ಕುಟುಂಬದಲ್ಲಿ ಅಶಾಂತಿ. ವಾರದ ಮಧ್ಯಭಾಗದಿಂದ ಚೇತರಿಕೆ. ಆಪ್ತರಿಂದ ಸಹಾಯ. ಯತ್ನಿಸಿದ ಕಾರ್ಯದಲ್ಲಿ ಸಿದ್ಧಿ. ವ್ಯಾಪಾರ ವಹಿವಾಟುಗಳಲ್ಲಿ ಲಾಭ. ಕುಟುಂಬ ಸೌಖ್ಯ. ಶುಭದಿನ: 11; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಸಂತೋಷ. ಇಷ್ಟಾರ್ಥ ಸಿದ್ಧಿ. ಪ್ರೀತಿಪಾತ್ರರ ಜೊತೆ ವಿಚಾರ ವಿನಿಮಯ. ಕೈ ಹಾಕಿದ ಕಾರ್ಯಗಳಲ್ಲಿ ಯಶಸ್ಸು, ಗೌರವ ಮತ್ತು ಪ್ರಶಂಸೆ ಪ್ರಾಪ್ತಿ. ಕ್ರಯ, ವಿಕ್ರಯಗಳಲ್ಲಿ ಪ್ರಗತಿ. ವಾರದ ಮಧ್ಯಭಾಗದಲ್ಲಿ ಒತ್ತಡ. ಆರೋಗ್ಯದಲ್ಲಿ ವ್ಯತ್ಯಾಸ. ನಿರೀಕ್ಷಿತ ಕಾರ್ಯ ವಿಳಂಬ. ವಾರಾಂತ್ಯದಲ್ಲಿ ಒತ್ತಡ ನಿವಾರಣೆ. ಶುಭದಿನ: 8; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಮಧ್ಯಭಾಗದವರೆಗೂ ಅನುಕೂಲ. ಕುಟುಂಬದವರಿಂದ ಸಹಾಯ. ಕೆಲಸ ಕಾರ್ಯಗಳಲ್ಲಿ ಪ್ರಗತಿ. ವ್ಯಾಪಾರ ವಹಿವಾಟುಗಳಲ್ಲಿ ನಿರೀಕ್ಷಿಸಿದ ಲಾಭ. ಕುಟುಂಬದಲ್ಲಿ ಶಾಂತ ವಾತಾವರಣ. ಪ್ರಯಾಣದಲ್ಲಿ ನಿರಾತಂಕ. ಪತಿ ಪತ್ನಿಯರಲ್ಲಿ ಸೌಹಾರ್ದತೆ. ವಾರಾಂತ್ಯದಲ್ಲಿ ಅನಾರೋಗ್ಯ. ವಾಹನ ಯಂತ್ರೋಪಕರಣಗಳಿಂದ ತೊಂದರೆ, ನಷ್ಟ. ಶುಭದಿನ: 9; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಮಕರ**

ಕೆಲಸ ಕಾರ್ಯಗಳಲ್ಲಿ ಅಲ್ಪ ಸ್ವಲ್ಪ ಒತ್ತಡಗಳಾದರೂ ಸಫಲವಾಗುವವು. ಕ್ರಯ ವಿಕ್ರಯ ವ್ಯಾಪಾರ ವಾಣಿಜ್ಯದಲ್ಲಿ ನಿರೀಕ್ಷಿತ ಲಾಭ. ಕುಟುಂದಿಂದ ಸಹಾಯ ಲಭ್ಯ. ಭೂ ವ್ಯವಹಾರದಲ್ಲಿ ಪ್ರಗತಿ ಕಂಡುಬರುವುದು. ವಾದ ವಿವಾದಗಳಲ್ಲಿ ಯಶಸ್ಸು. ಗೃಹ ನವೀಕರಣ ಕಾರ್ಯಗಳು. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಶುಭದಿನ: 12; ವಿಷ್ಣು, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಆರಂಭದಲ್ಲಿ ಕೆಲಸ ಕಾರ್ಯಗಳು ಮಾಡಲು ನಿರಾಸಕ್ತಿ. ಆರೋಗ್ಯದಲ್ಲಿ ವ್ಯತ್ಯಾಸ. ಲೇವಾದೇವಿಗಳಲ್ಲಿ ಹಾನಿ. ಕುಟುಂಬದ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ವಿರೋಧಿಗಳಿಂದ ಉಪದ್ರವ, ಲೆಕ್ಕಪತ್ರಗಳಲ್ಲಿ ಗೊಂದಲ. ವಾರದ ಮಧ್ಯಭಾಗದಿಂದ ಚೇತರಿಕೆ. ಕಾರ್ಯ ಸಾಧನೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ. ಆಪ್ತರಿಂದ ಗೌರವ ಪ್ರಾಪ್ತಿ. ಶುಭದಿನ: 13; ಗಣಪತಿ, ವಿಷ್ಣು ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಸಂತಸ. ಕೆಲಸ ಕಾರ್ಯಗಳಲ್ಲಿ ಸಫಲತೆ. ಕ್ರಯ ವಿಕ್ರಯ, ವ್ಯಾಪಾರ ವೃತ್ತಿಗಳಲ್ಲಿ ಪ್ರಗತಿ. ಪತಿ ಪತ್ನಿಯರಲ್ಲಿ ಒಮ್ಮತ. ಪ್ರೀತಿ ಪಾತ್ರರ ಭೇಟಿ. ವಾಹನ ಖರೀದಿ ಯತ್ನ. ವಾರದ ಮಧ್ಯಭಾಗದಲ್ಲಿ ಬೇಸರ. ಮಿತ್ರರಿಂದ ಒತ್ತಡ. ನಿರೀಕ್ಷೆಗೂ ಮೀರಿದ ಖರ್ಚು. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 9; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ